

بسم اللهِ الرّحمٰن الرّحيم

# ವ್ಯರ್ಥ ಕಾರ್ಯಗಳಿಂದ ದೂರವಿರಿ. ದೀನೀ ಸೇವೆಯಲ್ಲಿ ಮುಂದೆ ಸಾಗಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **26–02–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಲೋಕದಲ್ಲಿ ಬಹಳ ಜನರು ಅನೇಕ ಸಾರಿ ಲಘುವಾದ ಮತ್ತು ನಿಷ್ಕಾರಣವಾದ ಮಾತುಗಳನ್ನು ಆಡುತ್ತಾರೆ. ಕೆಲವರು ತಮಾಷೆ ಗೋಸ್ಕರ ಯಾರದಾದರೂ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಆ ಕಾರಣದಿಂದ ಜಗಳಗಳೂ ಸಮಸ್ಯೆಗಳೂ ಉದ್ಭವಿಸುತ್ತವೆ. ಕೆಲವು ಸಾರಿ ಜನರು ಒಟ್ಟು ಸೇರುವ ಸಭೆಗಳಲ್ಲಿ ಅಂತಹ ಮಾತುಗಳನ್ನಾಡುತ್ತಾರೆ. ಅವು ನಿರರ್ಥಕವಾಗಿರುತ್ತವೆ. ಕೇವಲ ಮಾತಿಗೋಸ್ಕರ ಮಾತನಾಡು ತ್ತಾರೆ. ಕೆಲವು ಸಾರಿ ಎಂತಹ ವ್ಯಂಗ್ಯ ಮಾತುಕತೆಗಳು ನಡೆಯುತ್ತವೆ ಎಂದರೆ ಅವುಗಳು ಅನ್ಯರಿಗೆ ನೋವನ್ನುಂಟು ಮಾಡುತ್ತವೆ. ಅಥವಾ ಯಾರಿಗೂ ಲಾಭದಾಯಕವಲ್ಲದ ವ್ಯರ್ಥವಾದ ಮಾತುಗಳು ಆಡಲ್ಪಡು ತ್ತವೆ. ಅವುಗಳು ಕೇವಲ ಸಮಯದ ನಾಶವೇ ಆಗಿರುತ್ತವೆ. ಲಘು ಮಾತು ಎಂಬ ಪದದ ಅರ್ಥ ಡಿಕ್ಷನರಿ ಪ್ರಕಾರ ನಿರರ್ಥಕ ಮತ್ತು ಲಾಭದಾಯಕವಲ್ಲದ ಮಾತು ಅಥವಾ ಯೋಚಿಸದೆ ಹೇಳುವ ಮಾತು ಎಂದಾಗಿದೆ. ನಿಷ್ಪ್ರಯೋಜಕ, ಅವಿವೇಕದ ಮಾತು ಎಂದು ಸಹ ಅರ್ಥವಿದೆ. ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಸತ್ಯವಿಶ್ವಾಸಿಗಳು ಲಘುವಾಗಿ ಮಾತನಾಡುವುದನ್ನು ತಡೆದಿರುವನು. ಓರ್ವ ಸತ್ಯ ವಿಶ್ವಾಸಿ ಲಘುವಾದುದನ್ನು ಕಾಣುವಾಗ ಅದರಿಂದ ದಾಟಿ ದೂರ ಹೋಗುತ್ತಾನೆ ಎಂದು ಹೇಳಲಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದ್ದಾರೆ: ಸ್ತ್ರೀಯರು ಸಾಮಾನ್ಯವಾಗಿ ಲಘುವಾದ ವಿಷಯಗಳ ಕಡೆಗೆ ಗಮನ ಹರಿಸುವವರಾಗಿರುತ್ತಾರೆ ಎಂದು. ಇಂದಿನ ಕಾಲದಲ್ಲಿ ಪುರುಷರ ಸ್ಥಿತಿ ಸಹ ಹೀಗೆಯೇ ಆಗಿದೆ. ಸ್ತ್ರೀಯರು ಸಾಮಾನ್ಯವಾಗಿ ಸುಮ್ಮನೆ ಕೇಳುತ್ತಾರೆ: ಈ ಬಟ್ಟೆ ಎಷ್ಟು ಕ್ರಯಕ್ಕೆ ಖರೀದಿಸಿದಿರಿ? ಈ ಆಭರಣ ಎಲ್ಲಿ ಮಾಡಿಸಿದಿರಿ? ಎಂದೆಲ್ಲಾ ಕೇಳುತ್ತಿರುತ್ತಾರೆ. ಇವು ಲಘುವಾದ ಚಿಕ್ಕ ಪುಟ್ಟ ಮಾತುಗಳಾಗಿವೆ. ಇವು ಕೇವಲ ಲೌಕಿಕ ಮಾತುಗಳಾಗಿವೆ. ಅವು ನಿಷ್ಪ್ರಯೋಜಕವಾಗಿವೆ. ಅವುಗಳಿಂದ ಕೆಲವು ಸಾರಿ ಹತ್ತಿರ ಕುಳಿತ ಹೆಂಗಸರ ಮೇಲೆ ಕೆಟ್ಟ ಪ್ರಭಾವ ಉಂಟಾಗುತ್ತದೆ. ಒಬ್ಬ ಮಹಿಳೆಗೆ ಇನ್ನೊಬ್ಬ ಮಹಿಳೆಯ ಪೂರ್ಣ ಚರಿತ್ರೆ ತಿಳಿದು ಕೊಳ್ಳುವ ತನಕ ಸಮಾಧಾನವಾಗುವುದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕಥೆ ಹೇಳುತ್ತಿದ್ದರು: ಒಬ್ಬ ಸ್ತ್ರೀ ಒಂದು ಉಂಗುರ ಮಾಡಿಸಿದಳು. ಆದರೆ ಯಾರೂ ಅದರ ಕಡೆಗೆ ಗಮನ ಹರಿಸಲಿಲ್ಲ. ಆಗ ಆ ಮಹಿಳೆ ಬೇಸರಗೊಂಡು ತನ್ನ ಮನೆಗೆ ಬೆಂಕಿ ಹಾಕಿದಳು. ಮನೆ ಸುಟ್ಟು ಹೋದ ನಂತರ, ಏನಾದರೂ ಬಾಕಿಯುಳಿದಿದೆಯೇ ಎಂದು ಜನರು ಕೇಳಿದರು. ಅವಳು ಹೇಳಿದಳು: ಈ ಉಂಗುರದ ಹೊರತು ಬೇರೆ ಏನೂ ಬಾಕಿಯಾಗಿ ಉಳಿಯಲಿಲ್ಲ. ಆಗ ಒಬ್ಬ ಮಹಿಳೆ ಕೇಳಿದಳು: ಸಹೋದರಿ, ಈ ಉಂಗುರ ನೀನು ಯಾವಾಗ ಮಾಡಿಸಿದೆ. ಇದು ಬಹಳ ಸುಂದರವಾಗಿದೆ. ಆಗ ಮನೆಗೆ ಬೆಂಕಿ ಕೊಟ್ಟ ಸ್ತ್ರೀ ಹೇಳಿದಳು: ನೀನು ಈ ಪ್ರಶ್ನೆ ನನ್ನೊಂದಿಗೆ ಮೊದಲೇ ಕೇಳುತ್ತಿದ್ದರೆ ನನ್ನ ಮನೆ ಸುಟ್ಟು ಹೋಗುತ್ತಿರಲಿಲ್ಲ.

ಈ ಸ್ವಭಾವ ಪುರುಷರಲ್ಲೂ ಇದೆ. ಅವರು ನಿಷ್ಕಾರಣವಾಗಿ ಪ್ರಶ್ನೆ–ಉತ್ತರ ಪ್ರಾರಂಭಿಸುತ್ತಾರೆ. ಅಸ್ಸಲಾಮು ಅಲೈಕುಮ್ ಹೇಳಿದ ನಂತರ ನೀವು ಎಲ್ಲಿಂದ ಬಂದಿರಿ? ಎಲ್ಲಿಗೆ ಹೋಗುವಿರಿ? ನಿಮ್ಮ ಆದಾಯ ಎಷ್ಟು ಎಂದೆಲ್ಲಾ ವಿಚಾರಿಸುತ್ತಾರೆ. ಅನ್ಯರು ಇವುಗಳನ್ನೆಲ್ಲಾ ಏಕೆ ತಿಳಿದುಕೊಳ್ಳಬೇಕು? ಪಾಶ್ಚಿಮಾತ್ಯ ಜನರು ಎಂದೂ ಪರಸ್ಪರ ಹೀಗೆ ಕೇಳುವುದಿಲ್ಲ. ನೀವು ಎಲ್ಲಿ ಉದ್ಯೋಗದಲ್ಲಿದ್ದೀರಿ? ನಿಮ್ಮ ವಿದ್ಯಾಭ್ಯಾಸ ಎಷ್ಟು? ಸಂಬಳ ಎಷ್ಟು ಸಿಗುತ್ತದೆ? ಎಂದೆಲ್ಲಾ ವಿಚಾರಿಸಿ ಕೊರೆಯಲು ಅವರು ಪ್ರಯತ್ನಿಸುವುದಿಲ್ಲ.

ಒಟ್ಟಿನಲ್ಲಿ ಲಘು ಎಂದರೆ ಅನ್ಯರಿಗೆ ಹಾನಿ ಉಂಟುಮಾಡುವ ಮಾತುಗಳು ಮಾತ್ರವಲ್ಲ ಪ್ರತಿಯೊಂದು ನಿಷ್ಪ್ರಯೋಜಕವಾದುದು ಲಘುವಾಗಿದೆ. ಆದುದರಿಂದ ಸತ್ಯವಿಶ್ವಾಸಿ ಪಾಲಿಸಬೇಕಾದ ಶರತ್ತೇನೆಂದರೆ ಅವನ ಮಾತು ಯಾವಾಗಲೂ ಆವಶ್ಯಕವಾದುದಾಗಿರಬೇಕು. ವ್ಯರ್ಥ ಕಾರ್ಯಗಳನ್ನು ತ್ಯಜಿಸಬೇಕು. ಪ್ರತಿಯೊಬ್ಬ ಸತ್ಯವಿಶ್ವಾಸಿ ತನ್ನ ವರ್ತನೆಯಿಂದ ಅನ್ಯರಿಗೆ ಪ್ರಯೋಜನಕರವಾಗಿ, ಔದಾರ್ಯಪೂರ್ವಕವಾಗಿ ತನ್ನ ಬಗ್ಗೆ ಅನ್ಯರು ಪರಿಗಣಿಸುವಂತೆ ಮಾಡಲು ಪ್ರಯತ್ನ ಮಾಡಬೇಕು. ಕೇವಲ ಸೀಮಿತ ವಲಯದಲ್ಲಿ, ಅವನ ಬಂಧುಗಳು ಮಾತ್ರ ಅವನ ವಿಯೋಗದಿಂದ ಅಳುವಂತಾಗಬಾರದು. ಅವನು ಎಲ್ಲಿ ವಾಸಿಸುತ್ತಿದ್ದಾನೋ ಅಲ್ಲಿ ಸಹ ಅವನ ಬಗ್ಗೆ ಶ್ರದ್ಧೆ ನೀಡುವವರು ಇರಬೇಕು.

(ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ, ಒಬ್ಬ ಮುಸ್ಲಿಮ್ ಸಂತನು ದೊರೆಯ ಮುಂದೆ ತನ್ನ ಅಜ್ಞಾನದ ಕಾರಣದಿಂದ ಹೇಳಿದ ಒಂದು ಮಾತು, ವಾಸ್ತವಿಕ ವಿಷಯದಿಂದ ಬಹಳ ದೂರವಿದ್ದ ಒಂದು ಮಾತಿನ ಬಗ್ಗೆ ವಿವರಿಸಿದ ನಂತರ ಹೇಳಿದರು).

ಪ್ರತಿಯೊಬ್ಬ ಮುಬಲ್ಲಿಗ್ ಕೂಡ ಭೌಗೋಳಿಕ ಶಾಸ್ತ್ರ, ಚರಿತ್ರೆ, ಗಣಿತ, ವೈದ್ಯ ಶಾಸ್ತ್ರ, ಮಾತನಾಡುವ ಶಿಷ್ಟಾಚಾರ, ಸಭೆಗಳ ಶಿಷ್ಟಾಚಾರ ಮೊದಲಾದುವುಗಳ ಬಗ್ಗೆ ಪ್ರಾಥಮಿಕ ಜ್ಞಾನವನ್ನಾದರೂ ಹೊಂದಿರಬೇಕು. ಗಣ್ಯರ ಸಭೆಗಳಲ್ಲಿ ಸೇರುವಾಗ ಅವುಗಳ ಆವಶ್ಯಕತೆಗಳಿರುತ್ತವೆ. ಇದು ಕಷ್ಟದ ಕೆಲಸವೇನೂ ಅಲ್ಲ. ಸ್ವಲ್ಪ ಪ್ರಯತ್ನ ಮಾಡಿದರೆ ಇವು ಲಭಿಸುತ್ತವೆ. ಇದಕ್ಕೋಸ್ಕರ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದ ಪ್ರಾಥಮಿಕ ಪುಸ್ತಕಗಳನ್ನು ಓದಬೇಕು. ಇಂದಿನ ಕಾಲದಲ್ಲಿ ನಮ್ಮ ಮುಬಲ್ಲಿಗರೊಂದಿಗೆ, ಮುರಬ್ಬಿಗಳೊಂದಿಗೆ ಆಧುನಿಕ ಸ್ಥಿತಿಗತಿಗಳ ಬಗ್ಗೆ ಜನರು ಪ್ರಶ್ನೆಗಳನ್ನು ಕೇಳುತ್ತಾರೆ. ಆದರೆ ಕೆಲವು ಮುಬಲ್ಲಿಗ್, ಮುರಬ್ಬಿಗಳು ಪತ್ರಿಕೆಗಳನ್ನು ಕ್ರಮಬದ್ಧವಾಗಿ ಓದುವುದಿಲ್ಲ ಆದುದರಿಂದ ಅವರಿಗೆ ಪ್ರಚಲಿತ ವಿದ್ಯಾಮಾನಗಳ ಬಗ್ಗೆ ಜ್ಞಾನವಿರುವುದಿಲ್ಲ. ಅವರು ವಾರ್ತೆಗಳನ್ನು ಆಲಿಸುವುದಿಲ್ಲ ಅಥವಾ ಯಾವುದೇ ವಿಷಯದ ಬಗ್ಗೆ ತಳಸ್ಪರ್ಶಿಯಾಗಿ ಚಿಂತಿಸುವುದಿಲ್ಲ. ಆ ಕಾರಣದಿಂದ ಲೌಕಿಕವಾದಿ ಜನರು ಅವರ ಬಗ್ಗೆ ಕೆಟ್ಟ ಅಭಿಪ್ರಾಯ ಹೊಂದುತ್ತಾರೆ. ಆದುದರಿಂದ ಇಂದಿನ ಲೋಕ ಸ್ಥಿತಿಗಳ ಬಗ್ಗೆ ಅರಿತು ಕೊಳ್ಳಬೇಕು. ಯಾವುದಾದರೂ ಸಭೆಗೆ ಹೋಗುವುದಾದರೆ ಅಲ್ಲಿನ ಆವಶ್ಯಕ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಹೋಗಬೇಕು.

ಒಂದು ನೀತಿಕಥೆ ಈ ರೀತಿಯಿದೆ: ಒಬ್ಬನಿಗೆ ಇಬ್ಬರು ಪುತ್ರರಿದ್ದರು. ಚಿಕ್ಕ ಮಗ ಬಹಳ ಹಣ ತೆಗೆದುಕೊಂಡು ಮನೆಯಿಂದ ಹೋದನು. ಅವನು ತನ್ನಲ್ಲಿದ್ದ ಎಲ್ಲ ಸಂಪತ್ತನ್ನು ಸುಖ ಭೋಗಗಳಲ್ಲಿ ಖರ್ಚು ಮಾಡಿ ಕೊನೆಗೆ ದುರ್ಗತಿಯಲ್ಲಿ ಮನೆಗೆ ಮರಳಿ ಬಂದಾಗ ಅವನ ತಂದೆ ಅವನಿಗೆ ಕ್ಷಮೆ ನೀಡಿದನು ಮತ್ತು ಅವನಿಗೆ ಗೌರವ ನೀಡಿದನು. ಅದೇ ರೀತಿ ಒಬ್ಬನು ತಪ್ಪು ಕೃತ್ಯಗಳನ್ನು ಮಾಡಿದ ನಂತರ ಅಲ್ಲಾಹನ ಸನ್ನಿಧಿಗೆ ಹೋಗಿ ಬಾಗಿಕೊಂಡು ತಾನು ಮಾಡಿದ ತಪ್ಪು ಕೃತ್ಯಗಳನ್ನು ನಿವೇದಿಸಿಕೊಂಡು ಕ್ಷಮೆ ಯಾಚಿಸುವಾಗ ಅಲ್ಲಾಹನು ಖಂಡಿತವಾಗಿ ಅವನ ತೌಬ ಅಂಗೀಕರಿಸುತ್ತಾನೆ ಮತ್ತು ಅವನ ಮೇಲೆ ದಯೆದೋರುತ್ತಾನೆ. ಆದುದರಿಂದ ಪ್ರತಿಯೊಬ್ಬ ಸತ್ಯವಿಶ್ವಾಸಿ ಅಲ್ಲಾಹನ ಗುಣಗಳನ್ನು ತನ್ನಲ್ಲಿ ಅಳವಡಿಸಿಕೊಂಡು ತನ್ನ ಸಹೋದರರೊಂದಿಗೆ ಉತ್ತಮವಾಗಿ ವರ್ತಿಸಬೇಕು. ಸತ್ಯವಾದ ಹೃದಯದೊಂದಿಗೆ ತಪ್ಪುಗಳನ್ನು ಒಪ್ಪಿಕೊಂಡು ಕ್ಷಮೆ ಯಾಚಿಸಲು ಬಂದರೆ ಅಂತಹ ಜನರನ್ನು ಕ್ಷಮಿಸಬೇಕು ಮತ್ತು ಅವರಿಗೋಸ್ಕರ ಪ್ರಾರ್ಥಿಸಬೇಕು.

ಮನುಷ್ಯನ ಕೆಲಸ ಪ್ರತಿಯೊಂದು ಸ್ಥಿತಿಯಲ್ಲೂ ಸ್ಥಿರವಾಗಿರಬೇಕು. ಒಮ್ಮೆ ಅಲ್ಲಿಗೆ ಸೇರಿದವರಾಗುವುದು ಇನ್ನೊಮ್ಮೆ ಇಲ್ಲಿಗೆ ಸೇರಿದವರಾಗುವುದು ಸರಿಯಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ನೀತಿಕಥೆ ಹೀಗೆ ವಿವರಿಸುತ್ತಿದ್ದರು: ಒಬ್ಬ ರಾಜನು ಒಮ್ಮೆ ಬದನೆಯಿಂದ ತಯಾರಿಸಿದ ಖಾದ್ಯ ತಿಂದಾಗ ಅವನಿಗೆ ಅದು ಬಹಳ ಇಷ್ಟವಾಯಿತು. ಇದನ್ನರಿತು ಅವನ ಸೇವಕನೊಬ್ಬ ಬದನೆ ಬಗ್ಗೆ ಬಹಳ ಹೊಗಳಿ ಹೇಳಿದನು. ಅದರ ಎಲ್ಲಾ ಉತ್ತಮ ಗುಣಗಳನ್ನು ವಿವರಿಸತೊಡಗಿದನು. ಈ ಮಾತುಗಳನ್ನು ಆಲಿಸಿ ರಾಜನು ಪ್ರತಿದಿನ ಬದನೆ ತಿನ್ನಲು ತೊಡಗಿದನು. ಬದನೆ ತಾಪದಾಯಕವಾದುದರಿಂದ ಪ್ರತಿದಿನ ಅದನ್ನು ತಿಂದ ಕಾರಣ ರಾಜನು ರೋಗಪೀಡಿತನಾದನು. ಆಗ ರಾಜ ಹೇಳಿದನು: ಬದನೆ ಬಹಳ ಕೆಟ್ಟ ವಸ್ತು ಎಂದು. ಇದನ್ನು ಕೇಳಿದ ರಾಜನ ಆ ನೌಕರ, ಬದನೆಯ ದೋಷಗಳನ್ನು ವಿವರಿಸಲು ತೊಡಗಿದನು. ಆಗ ಯಾರೋ ಒಬ್ಬ ಅವನೊಂದಿಗೆ ನೀನು ಹಿಂದೆ ಅದನ್ನು ಹೊಗಳುತ್ತಿದ್ದೆ. ಈಗ ಅದನ್ನು ನಿಂದಿಸುತ್ತಿರುವೆ. ನೀನು ಕನಿಷ್ಠಪಕ್ಷ ಸತ್ಯವನ್ನಾದರೂ ಹೇಳು ಎಂದು ಹೇಳಿದನು. ಆಗ ರಾಜನ ಆ ನೌಕರ ಹೇಳಿದನು: ನಾನು ರಾಜನ ಸೇವಕನಾಗಿದ್ದೇನೆ ಬದನೆಯ ಸೇವಕನಲ್ಲ.

ಇಂದಿನ ಕಾಲದ ಮುಸ್ಲಿಮರಲ್ಲಿ ಸಾಮಾನ್ಯವಾಗಿ ನಾವು ಇದನ್ನೇ ಕಾಣುತ್ತೇವೆ. ಅವರನ್ನು ನೋಡಿ ನಾವು ಪಾಠಕಲಿಯಬೇಕು. ಸ್ವಭಾವ ಗುಣದಲ್ಲಿಯೂ ಕಾರ್ಯನಿರ್ವಹಣೆಯಲ್ಲಿಯೂ ಮುಸ್ಲಿಮರು ಎಲ್ಲರಿಗಿಂತಲೂ ಬಲಿಷ್ಠರಾಗಬೇಕಾಗಿದೆ. ಆದರೆ ದುರದೃಷ್ಟವಶಾತ್ ಮುಸ್ಲಿಮರು ಎಲ್ಲರಿಗಿಂತ ಹೆಚ್ಚು ನೀಚ ಸ್ಥಿತಿಯಲ್ಲಿ ವರ್ತಿಸುವವರಾಗಿದ್ದಾರೆ. ಈ ಜನರು ಸತ್ಯವನ್ನು ಅವಲಂಬಿಸುವ ಪ್ರಶ್ನೆಯೇ ಇಲ್ಲ. ಸತ್ಯವನ್ನು ಸ್ಥಾಪಿಸಬೇಕಾದರೆ ಸರಿ ಮತ್ತು ತಪ್ಪುಗಳನ್ನು ತಮ್ಮ ಮುಂದೆ ಇರಿಸಿ ಅವುಗಳನ್ನು ಪಾರಾಂಬರಿಸಿ ಅದರ ಬಗ್ಗೆ ತಮ್ಮ ಅಭಿಪ್ರಾಯ ಸ್ಥಾಪಿಸಿ ಅನಂತರ ಸರಿಯಾದ ಸಲಹೆ ನೀಡಬೇಕಾಗಿದೆ.

ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವ ಮೂಲಕ ಮಾತ್ರ ಸಮಸ್ಯೆಗಳಿಗೆ ವಾಸ್ತವಿಕವಾದ ಪರಿಹಾರ ಸಿಗುವಂತಾಗುತ್ತದೆ. ಈ ಸಂಬಂಧ ತಖ್ವ (ದೇವ ಭಯ) ಮೂಲಕ ವರ್ಧಿಸುತ್ತದೆ. ಅಹ್ಮದಿಯರಾದ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬುವವರೆಂದು ವಾದಿಸುತ್ತೇವೆ. ನಾವು ನೈಜ ಇಸ್ಲಾಮ್ ಪ್ರಕಾರ ಜೀವಿಸಬೇಕಾಗಿದೆ. ನಮ್ಮ ಜೀವನದ ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ ನಾವು ಅಲ್ಲಾಹನ ಕಡೆಗೆಯೇ ನೋಡಬೇಕಾಗಿದೆ. ಅವನೊಂದಿಗೆ ಸಂಬಂಧ ಸ್ಥಾಪಿಸಬೇಕಾಗಿದೆ. ನಮಗೆ ಲೌಕಿಕ ವಿಷಯಗಳ ಮೂಲಕ ಎಂದೂ ಜಯ ಲಭಿಸಲಾರದು. ನಮ್ಮಲ್ಲಿ ತಖ್ವ ಮತ್ತು ದೇವಭಯವಿದ್ದರೆ, ನಾವು ತಖ್ವವನ್ನೂ ದೇವಭಯವನ್ನೂ ನಮ್ಮೊಳಗೆ ಸೃಷ್ಟಿಸುವುದಾದರೆ ನಾವು ಜಯಶಾಲಿಗಳಾಗುವೆವು. ನಾವು ಇಂತಹ ಸ್ಥಿತಿಯಲ್ಲಿದ್ದರೆ ದೇವದೂತರು ನಮ್ಮ ಮಾರ್ಗವನ್ನು ಸರಿಪಡಿಸುತ್ತಾ ಮುಂದೆ ಸಾಗುವರು– ಇನ್‌ಶಾಅಲ್ಲಾಹ್.

ನಾವು ತಖ್ವವನ್ನು ನಮ್ಮೊಳಗೆ ಸೃಷ್ಟಿಸಲು ಪ್ರಯತ್ನಿಸಬೇಕು ಮತ್ತು ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸಬೇಕು. ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಂಡು ಲಾಭವನ್ನು ಪಡೆಯಲು ಸಾಧ್ಯವಾಗುವುದಾದರೆ, ಅಲ್ಲಾಹನೊಂದಿಗೆ ಸಂಬಂಧವನ್ನು ಸ್ಥಾಪಿಸುವಾಗ ಅದು ಅವನಿಗೆ ಸಾವಿರಾರು ಪಟ್ಟು, ಅಲ್ಲ ಲಕ್ಷಾಂತರ ಪಟ್ಟು ಲಾಭವನ್ನು ತರುತ್ತದೆ. ಆದುದರಿಂದ ಅಲ್ಲಾಹನ ದಾಸನಾಗಿ ಮನುಷ್ಯನು ಅಲ್ಲಾಹನೊಂದಿಗೆ ಸ್ನೇಹ ಸಂಬಂಧವನ್ನು ಹೊಂದಬೇಕು ಅವನನ್ನು ಪ್ರೀತಿಸಬೇಕು. ಅಭಿವೃದ್ಧಿ ಹೊಂದುವ ಮಾರ್ಗ ಇದೇ ಆಗಿದೆ. ಮನುಷ್ಯನು ತನ್ನನ್ನು ಅಲ್ಲಾಹನ ಕೈಗೆ ವಹಿಸಿ ಕೊಡಬೇಕು. ಅಲ್ಲಾಹನು ಮನುಷ್ಯನನ್ನು ಯಾವ ಕಡೆಗೆ ಕರೆದುಕೊಂಡು ಹೋಗಲು ಬಯಸುತ್ತಾನೋ ಆ ಕಡೆಗೆ ನಡೆದುಕೊಂಡು ಹೋಗಬೇಕಾಗಿದೆ.

ಒಬ್ಬ ಸತ್ಯವಿಶ್ವಾಸಿಯ ಉದಾಹರಣೆ ಹೇಗಿರಬೇಕು? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸತ್ಯವಿಶ್ವಾಸಿಯ ಉದಾಹರಣೆ ಸತ್ಯಸಂಧನಾದ ಸ್ನೇಹಿತನ ಹಾಗೆ ಎಂದು ಹೇಳುತ್ತಿದ್ದರು. ಅವರು ಒಂದು ನೀತಿಕಥೆಯನ್ನು ಹೀಗೆ ವಿವರಿಸುತ್ತಿದ್ದರು. ಒಬ್ಬ ಐಶ್ವರ್ಯವಂತನ ಮಗನಿಗೆ ಕೆಲವು ಉಂಡಾಡಿ ಸ್ನೇಹಿತರಿದ್ದರು. ತಂದೆ ಮಗನೊಂದಿಗೆ, ಈ ಜನರು ನಿನ್ನ ಸತ್ಯಸಂಧರಾದ ಸ್ನೇಹಿತರಲ್ಲ, ಕೇವಲ ದುರಾಶೆಯಿಂದ ನಿನ್ನ ಬಳಿಗೆ ಬರುತ್ತಾರೆ, ಅವರಲ್ಲಿ ಯಾರೂ ನಿನ್ನೊಂದಿಗೆ ನಿಷ್ಠಾವಂತರಾಗಿಲ್ಲ ಎಂದು ಹೇಳುತ್ತಿದ್ದನು. ಆದರೆ ಆ ಹುಡುಗ ತನ್ನ ಪಿತನೊಂದಿಗೆ ಹೀಗೆ ಹೇಳಿದನು: ಪ್ರಾಯಶಃ ನಿಮಗೆ ಇಷ್ಟರವರೆಗೆ ಸತ್ಯಸಂಧರಾದ ಯಾವ ಸ್ನೇಹಿತರೂ ದೊರಕಲಿಲ್ಲ, ಆದುದರಿಂದ ನೀವು ಎಲ್ಲಾ ಜನರ ಬಗ್ಗೆ ತಪ್ಪು ಅಭಿಪ್ರಾಯ ಹೊಂದಿರುವಿರಿ. ನನ್ನ ಸ್ನೇಹಿತರು ಅಂತಹ ಜನರಲ್ಲ, ಅವರು ನಿಷ್ಠಾವಂತರಾಗಿದ್ದು ನನಗೋಸ್ಕರ ಜೀವಾರ್ಪಣೆ ಮಾಡಲು ಸಹ ಸಿದ್ಧರಾಗಿದ್ದಾರೆ ಎಂದು ಹೇಳಿದನು. ಆಗ ಅವನ ತಂದೆ ಹೇಳಿದನು: ಸತ್ಯಸಂಧನಾದ ಸ್ನೇಹಿತನು ಸಿಗುವುದು ಬಹಳ ಕಷ್ಟಕರವಾಗಿದೆ. ನನ್ನ ಇಡೀ ಜೀವಿತ ಕಾಲದಲ್ಲಿ ನನಗೆ ಅಂತಹ ಒಬ್ಬನೇ ಒಬ್ಬ ಸ್ನೇಹಿತ ಮಾತ್ರ ಲಭಿಸಿದನು. ಆದರೆ ಆ ಹುಡುಗ ತನ್ನ ಹಟವನ್ನು ಬಿಡಲಿಲ್ಲ. ಕೆಲವು ದಿನಗಳ ನಂತರ ಆ ಹುಡುಗ ತನ್ನ ಖರ್ಚಿಗೆ ಹಣ ಕೇಳಿದಾಗ ತಂದೆ ಹೇಳಿದರು: ನನಗೆ ನಿನ್ನ ಖರ್ಚು ಸಹಿಸಲಾರದಷ್ಟಿದೆ. ಈಗ ನನ್ನ ಬಳಿ ಹಣವಿಲ್ಲ. ನೀನು ನಿನ್ನ ಸ್ನೇಹಿತರೊಂದಿಗೆ ಹಣ ಕೇಳು ಎಂದು ಹೇಳಿದನು.

ವಾಸ್ತವಿಕವಾಗಿ ಆ ಹುಡುಗನ ತಂದೆ ಆ ಹುಡುಗ ತನ್ನ ಸ್ನೇಹಿತರನ್ನು ಪರೀಕ್ಷಿಸಲಿ ಎಂದು ಸಂದರ್ಭವನ್ನು ಕಾಯುತ್ತಿದ್ದನು. ಆ ಹುಡುಗನ ತಂದೆ ಹೇಳಿದ ಉತ್ತರದ ಬಗ್ಗೆ ಸ್ನೇಹಿತರು ತಿಳಿದಾಗ ಅವನ ಬಳಿಗೆ ಅವರು ಬಂದು ಹೋಗುವುದನ್ನು ನಿಲ್ಲಿಸಿದರು.

ಅವನನ್ನು ಕಾಣಲು ಬರಲಿಲ್ಲ. ಹುಡುಗನಿಗೆ ಬೇಸರವಾಯಿತು. ಅವನು ಸ್ವತಃ ಸ್ನೇಹಿತರನ್ನು ಕಾಣಲು ಅವರ ಬಳಿಗೆ ಹೋದನು. ಅವನು ಸ್ನೇಹಿತರ ಮನೆಗೆ ಹೋಗಿ ಬಾಗಿಲು ತಟ್ಟಿದಾಗ ಕೆಲವರು, 'ಅವನು ಈಗ ಇಲ್ಲಿಲ್ಲ' ಎಂದು ಹೇಳಿ ಕಳುಹಿಸಿದರು. ಇನ್ನು ಕೆಲವರು 'ಆತನಿಗೆ ಹುಷಾರಿಲ್ಲ. ಈಗ ಭೇಟಿಯಾಗಲಾರ' ಎಂದು ಹೇಳಿ ಕಳುಹಿಸಿದರು. ಈ ರೀತಿ ಇಡೀ ದಿನ ಸ್ನೇಹಿತರ ಮನೆ ಬಾಗಿಲು ತಟ್ಟುತ್ತಾ ತಿರುಗಾಡಿದರೂ ಯಾವ ಸ್ನೇಹಿತನೂ ಭೇಟಿಯಾಗಲು ಮನೆಯಿಂದ ಹೊರ ಬರಲಿಲ್ಲ. ಕೊನೆಗೆ ಸಾಯಂಕಾಲ ಆ ಹುಡುಗ ತನ್ನ ಮನೆಗೆ ಮರಳಿದನು. ಅವನ ತಂದೆ ಕೇಳಿದರು: 'ನಿನ್ನ ಸ್ನೇಹಿತರು ನಿನಗೆ ಏನು ಸಹಾಯ ಮಾಡಿದರು' ಆ ಹುಡುಗ ಹೇಳಿದ 'ಎಲ್ಲರೂ ಹರಾಮ್ ಕೋರರಾಗಿದ್ದಾರೆ. ಪ್ರತಿಯೊಬ್ಬನು ಒಂದೊಂದು ನೆವನ ಹೇಳಿ ತಪ್ಪಿಸಿಕೊಂಡನು' ಎಂದು ಹೇಳಿದ. ಆಗ ಹುಡುಗನ ತಂದೆ 'ನಾನು ನಿನ್ನೊಂದಿಗೆ ಹೇಳಿರಲಿಲ್ಲವೇ? ಈ ಜನರು ನಿಷ್ಠಾವಂತರಲ್ಲ ಎಂದು. ನಿನಗೆ ಸಹ ಅದರ ಅನುಭವವಾದುದು ಉತ್ತಮವಾಯಿತು. ಈಗ ನೀನು ಬಾ. ನಾನು ನಿನಗೆ ನನ್ನ ಸ್ನೇಹಿತನ ಭೇಟಿ ಮಾಡಿಸಿ ಕೊಡುವೆನು'. ಹಾಗೆ ಅವರಿಬ್ಬರೂ ತಂದೆಯ ಸ್ನೇಹಿತನ ಮನೆಗೆ ಹೋಗಿ ಬಾಗಿಲು ತಟ್ಟಿದರು. ಒಳಗಿಂದ ಶಬ್ದ ಕೇಳಿಸಿತು: ನಾನು ಈಗ ಬರುತ್ತೇನೆ ಎಂದು. ಆದರೆ ಬಹಳ ಸಮಯದ ತನಕ ಯಾರೂ ಬರಲಿಲ್ಲ. ಹುಡುಗನಿಗೆ ಸಂಶಯ ತಲೆದೋರಲು ತೊಡಗಿತು. ಅವನು ತಂದೆಯೊಂದಿಗೆ ಹೇಳಿದ, ಅಬ್ಬಾಜೀ, ನಿಮ್ಮ ಸ್ನೇಹಿತ ಸಹ ನನ್ನ ಸ್ನೇಹಿತರ ಹಾಗೆ ಎಂದು ತೋರುತ್ತದೆ. ತಂದೆ ಹೇಳಿದರು: ಇಲ್ಲ ಇನ್ನೂ ಸ್ವಲ್ಪ ಹೊತ್ತು ಪ್ರತೀಕ್ಷೆ ಮಾಡುತ್ತಾ ಇರು ಅವನು ಖಂಡಿತ ಬರುತ್ತಾನೆ ಎಂದು ಹೇಳಿದ. ಕೊನೆಗೆ ಬಾಗಿಲು ತೆರೆದು ಆ ಸ್ನೇಹಿತ ಹೊರಗೆ ಬಂದ. ಆತನ ಕೊರಳಲ್ಲಿ ಒಂದು ಖಡ್ಗ ನೇತಾಡುತ್ತಿತ್ತು. ಒಂದು ಕೈಯಲ್ಲಿ ಹಣದ ಚೀಲ ಇತ್ತು ಇನ್ನೊಂದು ಕೈ ತನ್ನ ಪತ್ನಿಯ ಕೈಯನ್ನು ಹಿಡಿದಿತ್ತು. ಬಾಗಿಲು ತೆರೆದ ಕೂಡಲೆ ತಂದೆಯ ಆ ಸ್ನೇಹಿತ ಹೇಳಿದ: ಕ್ಷಮಿಸಿರಿ, ನಿಮಗೆ ತುಂಬಾ ಕಷ್ಟವಾಯಿತು ಬೇಗನೆ ಬರಲು ಸಾಧ್ಯವಾಗಲಿಲ್ಲ. ನಾನು ಬೇಗನೆ ಬರದಿರಲು ಕಾರಣವೇನೆಂದರೆ ತಾವು ಬಾಗಿಲನ್ನು ತಟ್ಟಿದಾಗ ನಾನು ತಕ್ಷಣ ಬಾಗಿಲು ತೆರೆಯಲು ಬಂದೆನಾದರೂ ನಾನು ಭಾವಿಸಿದೆ, ಏನೋ ವಿಶೇಷ ಆವಶ್ಯಕತೆ ಇರಬಹುದು. ನೀವು ಸ್ವತಃ ಬಂದಿದ್ದೀರಿ. ನೀವು ಯಾವುದಾದರೂ ಸೇವಕನನ್ನು ಕಳುಹಿಸಬಹುದಾಗಿತ್ತು ಎಂದು ಯೋಚಿಸಿದೆ. ನಿಮಗೆ ಯಾವುದಾದರೂ ವಿಪತ್ತು ಬಂದೆರಗಿರಬಹುದೆಂದು ಭಾವಿಸಿದೆ. ನನ್ನ ಬಳಿ ಇರುವ ಮೂರು ವಸ್ತುಗಳು ಎಂದರೆ ಒಂದು ಖಡ್ಗ, ಒಂದು ವರ್ಷದ ಸಂಪಾದನೆಯ ಹಣ ತುಂಬಿಸಿದ ಚೀಲ ಮತ್ತು ನನ್ನ ಪತ್ನಿ ನಿಮ್ಮ ಮನೆಯಲ್ಲಿ ಏನಾದರೂ ಕಷ್ಟವಿದ್ದರೆ ಸೇವೆಗೆ ಸಿದ್ಧಳಾಗಿದ್ದಾಳೆ. ನಾನು ಹೊರಗೆ ಬರಲು ತಡವಾದುದೇಕೆಂದರೆ ಹಣದ ಚೀಲ ಹೂತಿಡಲಾಗಿತ್ತು ಅದನ್ನು ಹೊರ ತೆಗೆಯಲು ತಡವಾಯಿತು. ಖಡ್ಗ ಎತ್ತಿಕೊಂಡದ್ದು ಏಕೆಂದರೆ, ಜೀವಾರ್ಪಣೆ ಆವಶ್ಯಕವಾಗಿದ್ದರೆ ನಾನು ಜೀವಾರ್ಪಣೆಗೆ ಸಹ ನಾನು ಸಿದ್ಧನಾಗಿದ್ದೇನೆ. ಆಗ ಆ ಶ್ರೀಮಂತ ವ್ಯಕ್ತಿ ಹೇಳಿದ: ನನ್ನ ಪ್ರಿಯ ಸ್ನೇಹಿತ, ಈಗ ನನಗೆ ಯಾವ ಸಹಾಯದ ಆವಶ್ಯಕತೆಯೂ ಇಲ್ಲ. ನನ್ನ ಮೇಲೆ ಯಾವುದೇ ವಿಪತ್ತು ಬಂದೆರಗಿಲ್ಲ. ನಾನು ನನ್ನ ಮಗನಿಗೆ ಒಂದು ಪಾಠ ಕಲಿಸಲು ಬಂದಿರುವೆನು ಅಷ್ಟೆ.

ಈ ಕಥೆ ಹೇಳಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಿದ್ದರು. ಸತ್ಯವಾದ ಸ್ನೇಹ ಇದೇ ರೀತಿ ಇರುತ್ತದೆ. ಇದಕ್ಕಿಂತ ಉನ್ನತ ಮಟ್ಟದ ಸ್ನೇಹ ಸಂಬಂಧವನ್ನು ಮನುಷ್ಯನು ಅಲ್ಲಾಹನೊಂದಿಗೆ ಸ್ಥಾಪಿಸಬೇಕು. ಮನುಷ್ಯನು ತನ್ನ ಜೀವ, ಸಂಪತ್ತು ಮತ್ತು ತನ್ನ ಎಲ್ಲವನ್ನೂ ಅಲ್ಲಾಹನಿಗಾಗಿ ಬಲಿದಾನ ನೀಡಲು ಸಿದ್ಧನಾಗಬೇಕು. ಸ್ನೇಹಿತರು ಕೆಲವು ಸಾರಿ ನಮ್ಮ ಮಾತನ್ನು ಅಂಗೀಕರಿಸುತ್ತಾರೆ. ಕೆಲವು ಸಾರಿ ಅವರ ಮಾತನ್ನು ನಾವು ಅಂಗೀಕರಿಸ ಬೇಕಾಗುತ್ತದೆ. ಇದೇ ರೀತಿ ಮನುಷ್ಯನ ಮೇಲೆ ಕಡ್ಡಾಯವಾಗಿರುವುದೇ ನೆಂದರೆ ಸತ್ಯ ಹೃದಯದೊಂದಿಗೆ, ವಿಶಾಲ ಹೃದಯಿಯಾಗಿ ಅಲ್ಲಾಹನ ಮಾರ್ಗದಲ್ಲಿ ಬಲಿದಾನ ಅರ್ಪಿಸುತ್ತಾ ಹೋಗಬೇಕು. ಅಲ್ಲಾಹನು ನಮ್ಮ ಎಷ್ಟೆಲ್ಲಾ ಮಾತುಗಳನ್ನು ಅಂಗೀಕರಿಸುತ್ತಾ ಇದ್ದಾನೆ. ನಾವು ಹಗಲು ರಾತ್ರಿ ಅವನು ದಯಪಾಲಿಸಿದ ಅನುಗ್ರಹಗಳಿಂದ ಲಾಭ ಪಡೆಯುತ್ತಾ ಇದ್ದೇವೆ. ಅಲ್ಲಾಹನು ನಮ್ಮ ಸುಖ ಸಂತೋಷಕ್ಕೋಸ್ಕರ ಸೃಷ್ಟಿಸಿದ ವಸ್ತುಗಳನ್ನು ನಾವು ಉಪಯೋಗಿಸುತ್ತೇವೆ. ನಾವು ಇಷ್ಟೆಲ್ಲಾ ವಸ್ತುಗಳ ಲಾಭವನ್ನು ಪಡೆಯುತ್ತಿರುವುದು ನಮಗಿರುವ ಯಾವ ಅಧಿಕಾರದ ಅಥವಾ ಹಕ್ಕಿನ ಆಧಾರದಲ್ಲಿ? ಅಲ್ಲಾಹನು ನಮ್ಮ ಎಷ್ಟೆಲ್ಲಾ ಆಶಾಭಿಲಾಷೆಗಳನ್ನು ಈಡೇರಿಸಿ ಕೊಡುತ್ತಾ ಇದ್ದಾನೆ. ಆದರೂ ಅಲ್ಲಾಹನು ಒಂದಿಷ್ಟು ನಮ್ಮ ಆಶೆಗೆ ವಿರುದ್ಧವಾಗಿ ವರ್ತಿಸಿದರೆ, ಕೂಡಲೇ ಜನರು ಅಲ್ಲಾಹನ ಬಗ್ಗೆ ಎಷ್ಟು ಕೆಟ್ಟದಾಗಿ ಯೋಚಿಸುತ್ತಾರೆ? ಮನುಷ್ಯ ಮತ್ತು ಅಲ್ಲಾಹನ ಮಧ್ಯೆ ಇರಬೇಕಾದ ಮೂಲಭೂತ ಸಂಬಂಧ ಹೇಗಿರಬೇಕೆಂದರೆ ಕಷ್ಟವಿರಲಿ ಸುಖವಿರಲಿ ಯಾವ ಪರಿಸ್ಥಿತಿಗಳಲ್ಲೂ ನಮ್ಮ ಸಂಬಂಧ ಅಲ್ಲಾಹನೊಂದಿಗೆ ಸ್ಥಿರವಾಗಿರಬೇಕು. ಅದರಲ್ಲಿ ಯಾವ ವ್ಯತ್ಯಾಸವೂ ಉಂಟಾಗಬಾರದು.

ಆದುದರಿಂದ, ನಮಾಝ್ ಮಾಡುವ ಕರ್ತವ್ಯವನ್ನು ಈಡೇರಿಸದ ವರು ತಮ್ಮ ಆತ್ಮ ಪರಿಶೋಧನೆ ನಡೆಸಬೇಕು. ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವುದಾಗಿ ಮಾಡಿದ ಪ್ರತಿಜ್ಞೆ ಈಡೇರಿಸದವರು ತಮ್ಮ ಆತ್ಮಪರಿಶೋಧನೆ ನಡೆಸಬೇಕು. ಅಹ್ಮದಿಯ್ಯತ್ತಿನ ಕಾರಣದಿಂದ ಈ ದೇಶಕ್ಕೆ ಬಂದವರು ಇಲ್ಲಿಗೆ ತಾವು ಬಂದುದು ಅಹ್ಮದಿಯ್ಯತ್ತಿನ ಕಾರಣದಿಂದ ಮತ್ತು ಅಹ್ಮದಿಯ್ಯತ್ತಿನ ಕಾರಣ ತಮಗೆ ಇಲ್ಲಿನ ನಾಗರಿಕರಾಗುವ ಭಾಗ್ಯ ದೊರಕಿತು ಎನ್ನುವುದನ್ನು ಮರೆತು ಬಿಟ್ಟಿದ್ದಾರೆ. ಅವರು ಜಮಾಅತಿನ ಸೇವೆಗೋಸ್ಕರ ಮುಂದೆ ಬರಬೇಕಾಗಿದೆ.

ಅಲ್ಲಾಹನ ಬಗ್ಗೆ ಪ್ರೀತಿಯಲ್ಲಿ ತಲ್ಲೀನರಾದ ಓರ್ವ ಮಹಾನುಭಾವ ರನ್ನು, ಅಲ್ಲಾಹನ ಸಂದೇಶವನ್ನು ಲೋಕದಾದ್ಯಂತ ಹಬ್ಬಿಸುವುದಾಗಿ ಪ್ರತಿಜ್ಞೆ ಮಾಡಿದ ಮಹಾನುಭಾವರನ್ನು ನಾವು ನಂಬುತ್ತಿದ್ದೇವೆ ಎಂದು ನಾವು ವಾದಿಸುತ್ತೇವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧ ದಾಸನಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿರುವುದಾಗಿ ನಾವು ವಾದಿಸುತ್ತೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದಿಂದ ಅಲ್ಲಾಹನ ವಾಗ್ದಾನ ಈಡೇರಿದೆ ಎಂದು ನಾವು ನಂಬುವುದಾದರೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಭವಿಷ್ಯವಾಣಿ ಈಡೇರಿದೆ ಮತ್ತು ಇಸ್ಲಾಮ್ ತನ್ನ ಪುನಶ್ಚೇ ತನದ ಯುಗದಲ್ಲಿ ಪ್ರವೇಶಿಸಿದೆ, ಇಸ್ಲಾಮ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಲೋಕದ ಮೂಲೆ ಮೂಲೆಗಳಿಗೂ ತಲಪುವುದು ಎಂದು ನಾವು ನಂಬುವುದಾದರೆ, ನಾವು

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕೆಲಸದಲ್ಲಿ ಅವರಿಗೆ ಸಹಾಯಕರಾಗುವೆವು ಎಂದು ನಾವು ಅವರೊಂದಿಗೆ ಪ್ರತಿಜ್ಞೆ ಮಾಡಿದ್ದರೆ, ನಾವು ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳೊಂದಿಗೆ –ಅದು ಹೆಚ್ಚಾಗಿರಲಿ ಕಡಿಮೆಯಾಗಿರಲಿ– ಅವರ ಕರೆಗೆ ಓಗೊಟ್ಟು ಮುಂದೆ ಬರಬೇಕಾದುದು ನಮ್ಮ ಕರ್ತವ್ಯವಾಗಿದೆ. ಅವರ ಮೇಲೆ ನಮ್ಮ ಪ್ರೀತಿಯನ್ನು ಪ್ರಕಟಿಸಬೇಕಾಗಿದೆ. ಅಲ್ಲಾಹನೊಂದಿಗೆ, ಅವನ ಸಂದೇಶ ವಾಹಕರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಮತ್ತು ಅಲ್ಲಾಹನ ಮಸೀಹರೊಂದಿಗೆ ನಮಗಿರುವ ಪ್ರೀತಿಯನ್ನು ನಾವು ಪ್ರಕಟಿಸಬೇಕಾಗಿದೆ. ನಮ್ಮ ಸ್ಥಿತಿಗಳಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಬೇಕು. ನಮ್ಮ ನಿಷ್ಠೆಯ ಮಟ್ಟವನ್ನು ಉನ್ನತಗೊಳಿಸಬೇಕು. ನಾವು ಎಲ್ಲಾ ರೀತಿಯ ಬಲಿದಾನಗಳಿಗೆ ಸಿದ್ಧರಾಗಿರಬೇಕು. ಆ ಬಡ ಸ್ನೇಹಿತ ತನ್ನ ಶ್ರೀಮಂತ ಸ್ನೇಹಿತನ ಸೇವೆಗೆ ಸಿದ್ಧನಾದ ಹಾಗೆ. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ದಯಪಾಲಿಸಲಿ – ಆಮೀನ್.

————————*****————————

***Friday Sermon delivered by Hadrath Khaleefatul Masih Al Khamis***(atba)

*at Masjid Baithul Futhuh, London on 26-02-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon